ಮೇಲುಭಾವಣಿ ಇಲ್ಲದ ಮನೆಯು ಹೇಗೆ ಮಳೆಯಿಂದ ತೊಯ್ದು ಹೋಗುವುದೊ ಹಾಗೆಯೇ ನಿಯಮ ಸಂಯಮಗಳಿಲ್ಲದ ಮನಸ್ಸಿನೊಳಗೆ ಎಲ್ಲ ದುರ್ಭಾವನೆಗಳೂ ನುಗ್ಗುವುವು.

ನಾವು ನಿರೀಕ್ಷಿಸುವುದನ್ನು ಬಿಟ್ಟರೆ ಇಡೀ ಜಗತ್ತೇ ನಮ್ಮದಾಗುತ್ತದೆ.

— ಬುದ್ಧ

ಪ್ರಯತ್ನದ ಬೆಲೆ ತೆತ್ತಾಗ, ಹೇ ದೇವನೆ, ನೀನು ಪ್ರತಿಯೊಂದನ್ನೂ ಅನುಗ್ರಹಿಸುವೆ.

—ಲಿಯೊನಾರ್ಡೋ ಡ ವಿಂಚಿ

ಜೀವನವೆಂಬುದು ಸೈಕಲ್ ಓಡಿಸುವಂತೆ. ಪೆಡಲೊತ್ತುತ್ತಿರುವವರೆಗೂ ನಾವು ಬೀಳುವುದಿಲ್ಲ.

ಎಲ್ಲ ಜ್ಞಾನವು ಆಶ್ಚರ್ಯದಿಂದ ಪ್ರಾರಂಭವಾಗಿ ಆಶ್ಚರ್ಯದಲ್ಲಿ ಕೊನೆಗೊಳ್ಳುತ್ತದೆ. ಆದರೆ ಮೊದಲನೆಯ ಆಶ್ಚರ್ಯ ಅಜ್ಞಾನದ ಶಿಶು. ಎರಡನೆಯದು ಆರಾಧನೆಯ ಪಿತೃ.

—ಕೋಲ್‌ರಿಜ್

ತನ್ನ ಹಲ್ಲಿನಿಂದ ತನ್ನ ನಾಲಗೆಯನ್ನು ಕಚ್ಚಿಕೊಂಡು ನೋವಾದರೆ ಇತರರನ್ನು ದೂಷಿಸಿದರೆ ಏನು ಪ್ರಯೋಜನ?

—ಭಾಗವತ

ಅಜ್ಞಾನಿಯನ್ನು ಸುಲಭವಾಗಿ ತೃಪ್ತಿಪಡಿಸಬಹುದು, ಚೆನ್ನಾಗಿ ತಿಳಿದಿರುವವನನ್ನು ಇನ್ನೂ ಸುಲಭವಾಗಿ ತೃಪ್ತಿಪಡಿಸಬಹುದು. ಆದರೆ ಅಲ್ಪಜ್ಞಾನದಿಂದ ಉಬ್ಬಿರುವವನನ್ನು ಬ್ರಹ್ಮನೂ ತೃಪ್ತಿಪಡಿಸಲಾರ.

— ನೀತಿಶತಕ

# ಪ್ರಾರ್ಥನೆ

ಓಂ ದ್ಯೌಃ ಶಾಂತಿರಂತರಿಕ್ಷಂ ಶಾಂತಿಃ ಪೃಥಿವೀ ಶಾಂತಿ-
ರಾಪಃ ಶಾಂತಿರೋಷಧಯಃ ಶಾಂತಿಃ |
ವನಸ್ಪತಯಃ ಶಾಂತಿರ್ವಿಶ್ವೇ ದೇವಾಃ ಶಾಂತಿರ್ಬ್ರಹ್ಮ
ಶಾಂತಿಃ ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ||

ಓಂ. ದ್ಯುಲೋಕ (ಸೂರ್ಯಚಂದ್ರತಾರಾವಳಿಗಳು) ಶಾಂತಿಯಿಂದ ಕೂಡಿರಲಿ (ಅವುಗಳ ವಿಕೋಪಕ್ಕೆ ನಾವು ಒಳಗಾಗದೇ ಇರಲಿ), ಅಂತರಿಕ್ಷದಲ್ಲಿ ಶಾಂತಿಯಿರಲಿ (ವಾತಾವರಣವು ಶುದ್ಧವೂ ಆರೋಗ್ಯಕರವೂ ಆಗಿರಲಿ), ಭೂಮಿಯಲ್ಲಿಯೂ ಶಾಂತಿಯಿರಲಿ (ಭೂಕಂಪಾದಿಗಳು ಇಲ್ಲದಿರಲಿ), ನೀರಿನಲ್ಲಿ ಶಾಂತಿಯಿರಲಿ (ಅದು ಶುದ್ಧವಾಗಿರಲಿ, ಅತಿವೃಷ್ಟಿ ಅನಾವೃಷ್ಟಿಗಳು ಇಲ್ಲದಿರಲಿ), ಗಿಡಮರಗಳು ಶಾಂತಿಯಿಂದಿರಲಿ (ಅವು ಸಮೃದ್ಧವಾಗಿ ಬೆಳೆಯಲಿ), ದೇವತೆಗಳು ಶಾಂತಿಯಿಂದಿರಲಿ (ಪ್ರಕೃತಿಯು ಅನುಕೂಲಕರವಾಗಿರಲಿ) ಬ್ರಹ್ಮನಲ್ಲೂ ಶಾಂತಿಯಿರಲಿ (ಭಗವಂತನ ಅನುಗ್ರಹ ನಮ್ಮ ಮೇಲಿರಲಿ), ಎಲ್ಲವೂ ಶಾಂತಿಯಿಂದಿರಲಿ.

ಮಧು ವಾತಾ ಋತಾಯತೇ |
ಮಧು ಕ್ಷರನ್ತಿ ಸಿಂಧವಃ |
ಮಾಧ್ವೀರ್ನಃ ಸಂತ್ವೋಷಧೀಃ |
ಮಧು ನಕ್ತಮುತೋಷಸಿ |
ಮಧುಮತ್ ಪಾರ್ಥಿವಂ ರಜಃ |
ಮಧು ದ್ಯೌರಸ್ತು ನಃ ಪಿತಾ|
ಮಧುಮಾನ್ನೋ ವನಸ್ಪತಿಃ |
ಮಧುಮಾನಸ್ತು ಸೂರ್ಯಃ |
ಮಾಧ್ವೀರ್ಗಾವೋ ಭವನ್ತು ನಃ ||

ಗಾಳಿಯು ನಮಗೆ ಸುಖವಾಗಿ ಬೀಸಲಿ, ನದಿಗಳು ನಮಗೆ ಸುಖಕರವಾಗಿರಲಿ, ಗಿಡಮೂಲಿಕೆಗಳು ನಮಗೆ ಸುಖವನ್ನು ಉಂಟುಮಾಡಲಿ, ದಿನರಾತ್ರಿಗಳು ನಮಗೆ ಸುಖಪ್ರದವಾಗಿರಲಿ, ಪೃಥ್ವಿಯ ಧೂಳೂ ನಮಗೆ ಸುಖವನ್ನೀಯಲಿ, ಗ್ರಹ ನಕ್ಷತ್ರಗಳು ನಮಗೆ ಸುಖದಾಯಕವಾಗಿರಲಿ, ವೃಕ್ಷಗಳು ನಮಗೆ ಸುಖವನ್ನೇ ನೀಡುವಂತಾಗಲಿ, ಸೂರ್ಯನು ನಮಗೆ ಸುಖವನ್ನೇ ವರ್ಷಿಸಲಿ, ಹಸು (ಮುಂತಾದ ಪ್ರಾಣಿಗಳು) ನಮಗೆ ಸುಖದಾಯಕವಾಗಿರಲಿ.

(ನಮ್ಮ ಸುತ್ತಲಿನ ಪರಿಸರ ಮಾಲಿನ್ಯರಹಿತವಾಗಿ ಜೀವನಪೋಷಕವಾಗಿರಲೆಂಬುದು ಒಟ್ಟು ಅರ್ಥ.)